ವಿಜಯ ಕರ್ನಾಟಕ

# ಜೈನ್ ಕಾಲೇಜಿಗೆ ಚಾಂಪಿಯನ್ ಪಟ್ಟ

▪ ವಿಕ ಸುದ್ದಿಲೋಕ ಬೆಂಗಳೂರು

ಹೆರಾನ್ಸ್ ಕ್ಲಬ್ ಕ್ರಿಕೆಟ್ ಆಯೋಜಿಸಿದ್ದ ಅಂತರ ಕಾಲೇಜು ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಪ್ರೆಸಿಡೆನ್ಸಿ ಕಾಲೇಜು ವಿರುದ್ಧ 6 ವಿಕೆಟ್‌ಗಳ ಗೆಲುವು ಸಾಧಿಸಿದ ಎಸ್‌ಬಿಎಮ್ ಜೈನ್ ಕಾಲೇಜು ತಂಡ ಪ್ರಶಸ್ತಿ ತನ್ನದಾಗಿಸಿಕೊಂಡಿದೆ.

ಮಂಗಳವಾರ ನಡೆದ ಫೈನಲ್ ಪಂದ್ಯದಲ್ಲಿ ಟಾಸ್ ಗೆದ್ದು ಫೀಲ್ಡಿಂಗ್ ಆಯ್ದುಕೊಂಡ ಜೈನ್ ಕಾಲೇಜು ತಂಡ ಎದುರಾಳಿ ತಂಡವನ್ನು 125 ರನ್‌ಗೆ ಆಲೌಟ್ ಮಾಡಿತು. ಜೈನ್ ತಂಡದ ಬೌಲರ್‌ಗಳಾದ ವೈಶಾಖ್, ಲಾಲ್ ಸಚಿನ್ ಮತ್ತು ಶಿವಾಲಿ ಉತ್ತಮ ಬೌಲಿಂಗ್ ಪ್ರದರ್ಶಿಸಿ ಪ್ರೆಸಿಡೆನ್ಸಿ ತಂಡವನ್ನು ಅಲ್ಪ ಮೊತ್ತಕ್ಕೆ ಕಟ್ಟಿಹಾಕುವಲ್ಲಿ ಪ್ರಮುಖ ಪಾತ್ರವಹಿಸಿದರು. ರಕ್ಷಿತ್ ತಾಳ್ಮೆಯ ಆಟವಾಡಿ 49 ರನ್ ಗಳಿಸಿ ಮಿಂಚಿದರು. ಆದರೆ 24.2 ಓವರ್‌ಗಳಲ್ಲೇ ತಂಡ ಸರ್ವ ಪತನ ಕಂಡ ಕಾರಣ ಜೈನ್ ಕಾಲೇಜ್‌ಗೆ ಜಯದ ಹಾದಿ ಸುಲಭವಾಯಿತು.

126 ರನ್ ಜಯದ ಗುರಿಹೊತ್ತ ಜೈನ್ ಕಾಲೇಜು ತಂಡ, 22.1 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 129 ರನ್ ಗಳಿಸಿ ಚಾಂಪಿಯನ್ ಪಟ್ಟ ಗೆದ್ದುಕೊಂಡಿತು.



ಹೆರಾನ್ಸ್ ಕ್ರಿಕೆಟ್ ಕ್ಲಬ್ ಆಯೋಜಿಸಿದ್ದ ಅಂತರ ಕಾಲೇಜು ಕ್ರಿಕೆಟ್ ಟೂರ್ನಿಯಲ್ಲಿ ಗೆದ್ದ ಜೈನ್ ಕಾಲೇಜು ತಂಡಕ್ಕೆ ಮಾಜಿ ಕ್ರಿಕೆಟಿಗ ರಘುರಾಮ್ ಭಟ್ ಟ್ರೋಫಿ ವಿತರಿಸಿದರು.

**ಸ್ಕೋರ್ ವಿವರ:** ಪ್ರೆಸಿಡೆನ್ಸಿ ಕಾಲೇಜು 24.2 ಓವರ್‌ಗಳಲ್ಲಿ 125. ರಕ್ಷಿತ್ 49, ಪುನೀತ್ 20; ವೈಶಾಕ್ 22ಕೆ3

ಎಸ್‌ಬಿಎಮ್ ಜೈನ್ ಕಾಲೇಜು 22.1 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 129. ಲಾಲ್ ಸಚಿನ್ 32, ವೈಶಾಕ್ 32, ಎಸ್‌ಬಿ ಅರ್ಜುನ್ 36,

**ಅತ್ಯುತ್ತಮ ಆಟಗಾರ:** ಲಾಲ್ ಸಚಿನ್ ಎಸ್‌ಬಿಎಮ್ ಜೈನ್ ಕಾಲೇಜು,

**ಅತ್ಯುತ್ತಮ ಬ್ಯಾಟ್ಸ್‌ಮನ್:** ಲಾಲ್ ಸಚಿನ್, ಎಸ್‌ಬಿಎಮ್ ಜೈನ್ ಕಾಲೇಜು,

**ಅತ್ಯುತ್ತಮ ಬೌಲರ್:** ತಿಮ್ಮಯ್ಯ ಪ್ರೆಸಿಡೆನ್ಸಿ ಕಾಲೇಜು,

**ಅತ್ಯುತ್ತಮ ಆಲ್ ರೌಂಡರ್ :** ರಕ್ಷಿತ್ ಪ್ರೆಸಿಡೆನ್ಸಿ ಕಾಲೇಜು.